# ಕನ್ನಡದ ಕೊರಳು

**ಕನ್ನಡದ ಚೆಲುವು ಹಾಗೂ ಆರ್ದ್ರತೆಯನ್ನು ಸೂಸುವಂತಿದ್ದ ಕಂಠ ಅಪರ್ಣಾ ಅವರದು. ಕನ್ನಡನಾಡು ಅವರ ಧ್ವನಿಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ.**

■ **ಮಹತಿ**



‘ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ’ ಎನ್ನುವ ಕುವೆಂಪು ಅವರ ಮಾತನ್ನು, ಕನ್ನಡಕ್ಕಾಗಿ ನಾವು ಮಾಡುವ ಸಣ್ಣ ಕೆಲಸಕ್ಕೂ ಅಪಾರ ಮಹತ್ವವಿದೆ ಎಂದು ಅರ್ಥೈಸಬಹುದು. ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೊಳಗುತ್ತದೆ ಎನ್ನುವುದೂ ಕುವೆಂಪು ಅವರ ಮಾತೇ. ಈ ಮಾತನ್ನು ತಮ್ಮ ಜೀವನದ ಉದ್ದೇಶವೇ ಆಗಿಸಿಕೊಂಡಂತೆ ಬದುಕಿದವರು ಅಭಿನೇತ್ರಿ–ನಿರೂಪಕಿ ಅಪರ್ಣಾ.

ಐವತ್ತೆಂಟು ವರ್ಷಗಳ ಜೀವನದಿಂದ ನಿವೃತ್ತಿ ಪಡೆಯುವಂತೆ ಕಳೆದ ವಾರ (ಜುಲೈ 11) ನಿಧನರಾದ ಅಪರ್ಣಾ ಅವರ ಬಗ್ಗೆ ಗದ್ಗದಿತರಾದವರೆಲ್ಲ ಅವರ ಕಂಠಮಾಧುರ್ಯವನ್ನು ನೆನಪಿಸಿಕೊಂಡಿದ್ದಾರೆ. ಆಧುನಿಕ ಕರ್ನಾಟಕದ ಬಹು ಜನಪ್ರಿಯ ಧ್ವನಿಗಳಲ್ಲೊಂದು ಅಪರ್ಣಾ ಅವರದು.

ಸಿನಿಮಾ ಹಾಗೂ ಕಿರುತೆರೆ ನಟಿಯಾಗಿ ಅಪರ್ಣಾ ಖ್ಯಾತಿ ಗಳಿಸಿದ್ದರೂ, ನಿರೂಪಕಿಯಾಗಿಯೇ ಅವರನ್ನು ಬಹುತೇಕರು ನೆನಪಿಸಿಕೊಳ್ಳುವುದು ಹಾಗೂ ಗೌರವಿಸುವುದು. ನಿರೂಪಣೆಗೆ ವೃತ್ತಿಪರತೆ ಹಾಗೂ ಘನತೆ ಎರಡನ್ನೂ ತಂದುಕೊಟ್ಟದ್ದು ಅಪರ್ಣಾ ಹೆಚ್ಚುಗಾರಿಕೆ. ಕಾರ್ಯಕ್ರಮಗಳ ನಿರೂಪಣೆಯನ್ನು ವೃತ್ತಿಯನ್ನಾಗಿ ತೆಗೆದುಕೊಂಡು ಯಶಸ್ಸು ಸಾಧಿಸಬಹುದು ಎನ್ನುವುದನ್ನೂ ಅವರು ತೋರಿಸಿಕೊಟ್ಟರು. ನಿರೂಪಣೆಯನ್ನು ವೃತ್ತಿಯನ್ನಾಗಿ ಆರಿಸಿಕೊಳ್ಳಲು ಅನೇಕ ತರುಣ ತರುಣಿಯರಿಗೆ ಪ್ರೇರಣೆಯಾಗಿದ್ದರು. ಅಪರ್ಣಾ ನಿಧನದ ಸಂದರ್ಭದಲ್ಲಿ, ‘ಅವರು ಕಾಲೇಜನ್ನು ನಡೆಸದೆಯೂ ಅನೇಕ ನಿರೂಪಕರನ್ನು ರೂಪಿಸಿದ್ದರು’ ಎನ್ನುವರ್ಥದ ಬರಹವೊಂದು ಫೇಸ್‌ಬುಕ್‌ನಲ್ಲಿ ಕಾಣಿಸಿಕೊಂಡಿತ್ತು.

ಪುಟ್ಟಣ್ಣ ಕಣಗಾಲರ ‘ಮಸಣದ ಹೂವು’ ಸಿನಿಮಾದಲ್ಲಿ ನಟಿಸುವ ಮೂಲಕ ಚಿತ್ರರಂಗಕ್ಕೆ ಪರಿಚಿತರಾಗಿ, ಮೊದಲ ಸಿನಿಮಾದಲ್ಲೇ ಜನಪ್ರಿಯತೆ ಗಳಿಸಿದರೂ ಅಪರ್ಣಾ ಸಿನಿಮಾರಂಗದಲ್ಲಿ ಗಟ್ಟಿಯಾಗಿ ಕಾಲೂರಲಿಲ್ಲ. ಚಿತ್ರೋದ್ಯಮ ಬಯಸುವ ಸೌಂದರ್ಯದ ವರ್ಚಸ್ಸಿನ ಮಾನದಂಡವನ್ನು ಎಟುಕಿಸಿಕೊಳ್ಳುವ ಪ್ರಯತ್ನದಲ್ಲಿ ಉತ್ಸಾಹ ತೋರದ ಅವರು, ನಿರೂಪಣೆಯಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡರು. ನಿರೂಪಣೆಯಲ್ಲಿ ಎಷ್ಟು ಯಶಸ್ವಿಯಾದರೆಂದರೆ, ಅವರನ್ನು ಒಮ್ಮೆಯೂ ನೋಡದವರು ಕೂಡ ಧ್ವನಿಯಿಂದ ಗುರ್ತಿಸುತ್ತಿದ್ದರು. ಈ ಜನಪ್ರಿಯತೆಯ ಕಾರಣದಿಂದಲೇ, ಬೆಂಗಳೂರಿನ ಮೆಟ್ರೊ ರೈಲಿನ ಸೇವೆಯಲ್ಲಿ ಪ್ರಯಾಣಿಕರಿಗೆ ನೀಡುವ ಸೂಚನೆಗಳಲ್ಲಿ ಅಪರ್ಣಾ ಅವರ ಧ್ವನಿಯನ್ನು ಬಳಸಿಕೊಳ್ಳಲಾಗಿತ್ತು.

ಕನ್ನಡದ ಚೆಲುವು ಹಾಗೂ ಆರ್ದ್ರತೆಯನ್ನು ಸೂಸುವಂತಿದ್ದ ಕಂಠ ಹಾಗೂ ಸಾಹಿತ್ಯದ ನಂಟಿನ ಪರಿಣಾಮಕಾರಿ ಬಳಕೆ ಅಪರ್ಣಾ ಅವರ ನಿರೂಪಣೆ ಸಹೃದಯರಿಗೆ ಆಪ್ತವಾಗಲು ಕಾರಣವಾಗಿತ್ತು. ಅಪರ್ಣಾ ಅವರ ನಿರೂಪಣೆ ಇರುವುದು ಕಾರ್ಯಕ್ರಮದ ವಿಶೇಷಗಳಲ್ಲೊಂದು ಎನ್ನುವಂತಾಯಿತು. ಸಾವಿರಾರು ಖಾಸಗಿ ಮತ್ತು ಸರ್ಕಾರಿ ಕಾರ್ಯಕ್ರಮಗಳನ್ನು ನಿರೂಪಿಸಿದ ಅವರು ತಮ್ಮ ಮಾತುಗಾರಿಕೆಯ ಮೂಲಕ ವೇದಿಕೆ ಹಾಗೂ ಸಭಿಕರ ನಡುವೆ ಆಪ್ತ–ಆರ್ದ್ರ ಭಾವಲೋಕವೊಂದನ್ನು ಸೃಜಿಸುತ್ತಿದ್ದರು.

ಅಪರ್ಣಾ ಅವರ ಹಾಸ್ಯಪ್ರಜ್ಞೆ ಬೆಳಕಿಗೆ ಬಂದದ್ದು ಕಿರುತೆರೆಯ ‘ಮಜಾ ಟಾಕೀಸ್’ ಮೂಲಕ. ಎಲ್ಲರ ಕಾಲೆಳೆಯುವುದರ ಜೊತೆಗೆ, ಸಹ ನಗೆಗಾರರ ಎಗತಾಳೆಗೂ ಗುರಿಯಾಗುತ್ತಿದ್ದ ವರಲಕ್ಷ್ಮಿ ಪಾತ್ರ ಅಪರ್ಣಾ ಅವರಿಗೆ ಬೇರೊಂದು ಬಗೆಯ ಐಡೆಂಟಿಟಿ ತಂದುಕೊಟ್ಟಿತ್ತು. ಕೆಲವು ಧಾರಾವಾಹಿಗಳಲ್ಲೂ ಅವರು ನಟಿಸಿದ್ದರು. ಆದರೆ, ಅವರ ಮೊದಲ ಆದ್ಯತೆ, ನಿರೂಪಣೆಗೆ. ಆಕಾಶವಾಣಿ, ದೂರದರ್ಶನ ಸೇರಿದಂತೆ ನಾಡಿನುದ್ದಗಲದ ಕಾರ್ಯಕ್ರಮಗಳ ಕನ್ನಡ ಸಂಭ್ರಮದ ಭಾಗವಾಗಿದ್ದರು. ಅಪರ್ಣಾ ಮಾತಿನ ಮೋಹಕತೆ ಮಾರ್ದನಿಸದ ವೇದಿಕೆಯಿಲ್ಲ ಎನ್ನುವ ಸ್ಥಿತಿ ಇತ್ತೀಚಿನವರೆಗೂ ಇತ್ತು. ಸಾಹಿತ್ಯ ಸಮ್ಮೇಳನವಿರಲಿ, ಸಿನಿಮಾ ಸಂಭ್ರಮವಿರಲಿ, ಎಲ್ಲೆಡೆಯೂ ಸಲ್ಲುವ ದನಿ ಅವರದಾಗಿತ್ತು.

ವಿವಿಧ ವಯೋಮಾನಗಳ ಹೆಣ್ಣುಮಕ್ಕಳಿಗೆ ಆತ್ಮವಿಶ್ವಾಸದ ದನಿಯಾಗಿ, ಅಭಿವ್ಯಕ್ತಿಯಾಗಿ ಅಪರ್ಣಾ ಕಾಣಿಸಿದ್ದರು. ಸಹೃದಯರೆದೆಯಲ್ಲಿ ಕನ್ನಡದ ಬಗ್ಗೆ ಅಭಿಮಾನ ಮೂಡಿಸುವಂತೆ ಅವರ ಮಾತುಗಾರಿಕೆ ಪ್ರಭಾವಶಾಲಿ ಆಗಿರುತ್ತಿತ್ತು.

ಸಾವಿನ ಸಂದರ್ಭದಲ್ಲೂ ಅಪರ್ಣಾ ಒಂದು ‘ಮಾದರಿ’ ಉಳಿಸಿಹೋಗಿದ್ದಾರೆ. ‘ಜಗವೆಲ್ಲ ನಗುತಿರಲಿ, ಜಗದಳವು ನನಗಿರಲಿ’ ಎನ್ನುವ ಕಾವ್ಯ–ಕಲೆಯ ಮಾದರಿಯದು. ಎರಡು ವರ್ಷಗಳಿಂದ ಕ್ಯಾನ್ಸರ್‌ನ ನಂಜುಣ್ಣುತ್ತಿದ್ದರೂ, ಆ ಸಂಕಟವನ್ನು ಒಮ್ಮೆಯೂ ಅವರು ಬಹಿರಂಗವಾಗಿ ಹಂಚಿಕೊಂಡಿದ್ದಿಲ್ಲ. ಹತ್ತಿರದವರೊಂದಿಗೆ ಅಳಲು ತೋಡಿಕೊಂಡ ಉದಾಹರಣೆಗಳೂ ಕಡಿಮೆ. ಕೊನೆಯವರೆಗೂ ದಿಟ್ಟತನದಿಂದ ಕ್ಯಾನ್ಸರ್‌ನೊಂದಿಗೆ ಸೆಣಸಿದ ಅಪರ್ಣಾ, ಸಾವನ್ನೂ ಘನತೆಯಿಂದಲೇ ಎದುರಿಸಿದ್ದಾರೆ. ಕನ್ನಡನಾಡು ಅವರ ಧ್ವನಿಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

ಚಿತ್ರ: ಚಂದ್ರಹಾಸ ಕೋಟೆಕಾರ್

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65